# ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು : ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2050**

ಉತ್ತರಿಸಬೇಕಾದ ದಿನಾಂಕ : **27.03.2020**

ಉತ್ತರಿಸುವ ಸಚಿವರು : ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಹಾಲು ಮಹಾಮಂಡಲ ವತಿಯಿಂದ ಶೇಖರಿಸಲಾಗುತ್ತಿರುವ ಹಾಲಿನ ಪ್ರಮಾಣ ಎಷ್ಟು; (ಜಿಲ್ಲಾ ಹಾಲು ಮಹಾಮಂಡಲವಾರು ವಿವರಗಳನ್ನು ನೀಡುವುದು. | ಕರ್ನಾಟಕ ಹಾಲು ಮಹಾಮಂಡಳಿ ಅಧೀನದಲ್ಲಿರುವ 14 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಫೆಬ್ರವರಿ-2020 ರ ಅಂತ್ಯಕ್ಕೆ ದಿನಂಪ್ರತಿ ಶೇಕಡವಾರು ಒಟ್ಟು 66.23 ಲಕ್ಷ ಕೆ.ಜಿ. ಹಾಲು ಶೇಖರಣೆಯಾಗುತ್ತಿದೆ. |

**ಜಿಲ್ಲಾ ಒಕ್ಕೂಟಗಳ ಹಾಲು ಶೇಖರಣೆ ವಿವರ**

| ಕ್ರ.ಸಂ. | ಒಕ್ಕೂಟ | ಹಾಲಿನ ಶೇಖರಣೆ ಲಕ್ಷ ಕೆ.ಜಿ.ಗಳಲ್ಲಿ |
|---|---|---|
| 1 | ಬೆಂಗಳೂರು | 13.99 |
| 2 | ಕೋಲಾರ | 7.77 |
| 3 | ಮೈಸೂರು | 4.70 |
| 4 | ಚಾಮರಾಜನಗರ | 1.88 |
| 5 | ಮಂಡ್ಯ | 6.80 |
| 6 | ತುಮಕೂರು | 6.20 |
| 7 | ಹಾಸನ | 8.10 |
| 8 | ಧಾರವಾಡ | 2.12 |
| 9 | ಬೆಳಗಾವಿ | 1.87 |
| 10 | ವಿಜಯಪುರ | 1.53 |
| 11 | ಕಲಬುರಗಿ | 5.29 |
| 12 | ದ.ಕನ್ನಡ | 4.24 |
| 13 | ಶಿವಮೊಗ್ಗ | 4.84 |
| 14 | ಬಳ್ಳಾರಿ | 1.66 |

-2-

| | | |
|---|---|---|
| ಆ | ರಾಜ್ಯ ಹಾಲು ಮಹಾಮಂಡಲ ವತಿಯಿಂದ ಇಡೀ ರಾಜ್ಯದ ಹಾಲು ಉತ್ಪಾದಕರಿಗೆ ಏಕ ರೀತಿಯ ಹಾಲು ಖರೀದಿ ದರವನ್ನು ನೀಡಲು ಇರುವ ತೊಂದರೆ ಏನು; | ಪ್ರತಿ ಒಕ್ಕೂಟವು ತನ್ನದೇ ಆದ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಪ್ರತ್ಯೇಕ ಉಪವಿಧಿ ಮತ್ತು ತನ್ನದೇ ಆದ ಚುನಾಯಿತ ಆಡಳಿತ ಮಂಡಳಿಯನ್ನು ಹೊಂದಿರುತ್ತದೆ. ಒಕ್ಕೂಟಗಳ ಹಾಲು ಶೇಖರಣೆ, ಮಾರಾಟ, ಖರ್ಚು-ವೆಚ್ಚಗಳು ಮುಂತಾದವುಗಳನ್ನು ಗಣನೆಗೆ ತೆಗೆದು ಕೊಂಡು ಕಾಲ-ಕಾಲಕ್ಕೆ ಹಾಲು ಒಕ್ಕೂಟಗಳೇ ಹಾಲು ಶೇಖರಣಾ ದರವನ್ನು ನಿರ್ಧರಿಸುವುದರಿಂದ ರಾಜ್ಯವ್ಯಾಪಿ ಒಂದೇ ದರ ನೀಡಲು ಬರುವುದಿಲ್ಲ. |
| ಇ | ರಾಜ್ಯ ಹಾಲು ಮಹಾಮಂಡಲಿಯು ರಾಜ್ಯದ ಹಾಲು ಉತ್ಪಾದಕರನ್ನು ಕಡೆಗಣಿಸಿರುವುದರಿಂದ ಖಾಸಗಿ ಡೈರಿಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಹಾಲು ಮಹಾಮಂಡಳಿಯು ಹಾಲು ಶೇಖರಣೆ ಮಾಡುವುದರಲ್ಲಿ ರಾಷ್ಟ್ರದಲ್ಲಿ ದ್ವಿತೀಯ ಸ್ಥಾನದಲ್ಲಿದೆ.<br><br>ಹಾಲು ಶೇಖರಣೆಯಲ್ಲಿ ಖಾಸಗಿ ಡೈರಿಗಳ ಪಾಲು ಕೇವಲ ಶೇ.10-15 ಮಾತ್ರ ಇರುತ್ತದೆ. |
| ಈ | ಬಂದಿದ್ದಲ್ಲಿ, ಈ ಖಾಸಗಿ ಡೈರಿಗಳಿಗೆ ಕಡಿವಾಣ ಹಾಕಿ ರಾಜ್ಯದ ಹಾಲು ಉತ್ಪಾದಕರನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರದಿಂದ ಹಾಲು ಉತ್ಪಾದಕರಿಗೆ ಕ್ಷೀರಧಾರೆ ಯೋಜನೆಯಡಿ ಪ್ರತಿ ಲೀಟರ್ ಗುಣಮಟ್ಟದ ಹಾಲು ಸರಬರಾಜಿಗೆ ರೂ.5/- ಪ್ರೋತ್ಸಾಹಧನವನ್ನು ನೇರವಾಗಿ ಡಿ.ಬಿ.ಟಿ. ಕ್ಷೀರಸಿರಿ ತಂತ್ರಾಂಶದ ಮೂಲಕ ಬ್ಯಾಂಕ್ ಆಧಾರ್ ಜೋಡಣೆಯಾಗಿರುವ ಉಳಿತಾಯ ಖಾತೆಗಳಿಗೆ ಪಾವತಿ ಮಾಡಲಾಗುತ್ತಿದೆ.<br><br>ಹಾಲು ಉತ್ಪಾದಕರುಗಳು ಹೊಂದಿರುವ ರಾಸುಗಳಿಗೆ ವಿಮಾ ಸೌಲಭ್ಯವನ್ನು ಒದಗಿಸಲು ಯೋಜನೆಯನ್ನು ಒಕ್ಕೂಟಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ ರಾಸುಗಳು ಅಕಾಲ ಮರಣ ಹೊಂದಿದಲ್ಲಿ ವಿಮಾ ಸಂಸ್ಥೆಯಿಂದ ಪರಿಹಾರ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಅನೇಕ ತಾಂತ್ರಿಕ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.<br><br>ಉತ್ಪಾದಕರಿಂದ ಖರೀದಿಸುವ ಹಾಲಿನ ದರವನ್ನು ಜೂನ್-2019 ರಿಂದ ಫೆಬ್ರವರಿ-2020ರ ಅಂತ್ಯಕ್ಕೆ ಒಕ್ಕೂಟಗಳಲ್ಲಿ 2 ರಿಂದ 3 ಬಾರಿ ಪರಿಷ್ಕರಿಸಲಾಗಿದೆ. |

**ಪಸಂಮೀ 140 ಸಲೆವಿ 2020**

(ಪ್ರಭು ಬಿ. ಚೌಹ್ವಾಣ್)
**ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು**